# ಕವಲು ಹಾದಿ

■ ಮಂಡಲಗಿರಿ ಪ್ರಸನ್ನ



**1**

ಸೂರ್ಯ ಪಶ್ಚಿಮದಲ್ಲಿ ಮರೆಯಾಗುತ್ತಿದ್ದ. ಹಕ್ಕಿಗಳೆಲ್ಲ ಗೂಡು ಸೇರಲಿಕ್ಕೆ ಹೆಣಗಾಡುತ್ತಿದ್ದಂತೆ ಚಿಂವ್... ಚಿಂವ್... ಸದ್ದು ಮಾಡುತಿದ್ದವು. ಪಾರ್ವತಿ ಕತ್ತಲಾಗತಿದ್ದಂಗೆ ತಗಡಿನ ಡಬ್ಬಾಗಿನ ಅಳಿದುಳಿದ ಜೋಳದ ಹಿಟ್ಟನ್ನೆಲ್ಲಾ ಕೂಡಿಸಿ ಒಲಿ ಮುಂದ ಇಟ್ಟಿದ್ದ ತಾಂಬಾಣದಾಗ ಹಾಕಿಕೊಂಡು ರೊಟ್ಟಿ ಬಡಿಲಕ್ಕ ತಯಾರಿ ನಡೆಸಿದ್ದಳು. ರೊಟ್ಟಿ ಬಡಿಲಾಕ ಎಳ್ಳಷ್ಟೂ ಮನಸಿಲ್ಲದಿದ್ದರೂ ಹತ್ತು ವರ್ಷದ ಮಗ, ಎಂಟು ವರ್ಷದ ಮಗಳು ಇಬ್ಬರೂ ಒಂದೇ ಸಮನೆ ಹಸಿವು ಅಂತಾ ಗೋಳಾಡಕತ್ತಿದ್ದನ್ನು ನೋಡಿ ನಾಕು ರೊಟ್ಟಿ ಬಡದ್ರಾತು ಅಂತಾ ತಯಾರಾದಾಕಿ ಹೈರಾಣಾಗಿ ಸಣ್ಣಸಣ್ಣ ಎಂಟು ರೊಟ್ಟಿ ಬಡದಳು. ಒಲಿ ಆರಿಸಿ ಕೈತೊಳಕಂಡ ಬಂದು ಎರಡೂ ಮಕ್ಕಳ ಕೈಯಾಗ ಒಂದೊಂದು ರೊಟ್ಟಿ ಇಟ್ಟು ಮುಂಜಾನೆ ಉಳಿದಿದ್ದ ಪಲ್ಯ–ಚಟ್ನಿ ಹಚ್ಚಿಕೊಟ್ಟಳು. ಮಕ್ಕಳೆರಡು ರೊಟ್ಟಿ ತಿಂದು ಮೂಲೆ ಸೇರಿದ್ದವು.

ಹೊರಗ ಸಣ್ಣಗ ಕತ್ತಲಾಗಹತ್ತಿತ್ತು. ದೂರದ ಬೀದಿ ವಿದ್ಯುತ್ ದೀಪಗಳು ಬುಡ್ಡಿದೀಪದಂತೆ ಉರಿಯುತ್ತಿದ್ದವು. ಬಚ್ಚಲ ಮನಿಗೆ ಹೋಗಿ ಮಾರಿ ಮ್ಯಾಲ ಒಂದಷ್ಟು ನೀರು ಸಿಡಿಸಿಗೆಂಡು ಹೊರಗ ಬಂದ ಆಕಿಗಿ ಹಾಯೆನಿಸಿತು. ಗಂಡ ಸಂಜೆ ಎಂಟಾಗಕತ್ತಿದ್ದರೂ ಇನ್ನೂ ಮನಿಗೆ ಬರಲಾರದ್ದಕ್ಕ ಪಾರ್ವತಿಗೆ ಕಳವಳ ಸುರುವಾಗಿತ್ತು. ಹಂಗೆ ಒಂದಿಷ್ಟು ಹೊರಗಿನ ಕಟ್ಟಿಗಿ ಹೋಗಿ ಕೂತಳು. ಹಾಗೆ ಕಾಯುತ್ತಾ ಕೂಡಬೇಕು ಅಂದಾಕಿಗೆ ಹಸಿ ಹಣೆ ನೆನಪಾಗಿ ಒಳಗ ಹೋಗಿ ಕುಂಕುಮ ಇಟಗಂಡು ಬಂದಳು. ಹಿಂದಿನಿಂದಲೆ 'ಮುತ್ತೈದೇರು ಸಂಜಿ ಹೊತ್ತಿನಾಗ ಹಸಿ ಹಣೇಲಿ ಇರಬಾರದವ...' ಎಂದು ಅಪ್ಪ ಹೇಳುತ್ತಿದ್ದ ಮಾತುಗಳು ಅವಳಿಗೆ ನೆನಪಾದವು. ಅದು ಇದು ಕೆಲಸ ಮಾಡಿಕೊಳ್ಳದರ ಒಳಗ ಸಮಯ ರಾತ್ರಿ ಹತ್ತು ಗಂಟೆ ಆಗಕತ್ತಿತ್ತು.

ದೂರದಲ್ಲಿದ್ದ ಸಿಮೆಂಟ್ ಫ್ಯಾಕ್ಟರಿ ಬಂದಾಗಿ ನಾಕಾರು ವರ್ಷಗಳೆ ಕಳೆದಿದ್ದವು. ಆದರೆ ಅದರ ಸೈರನ್ ಮಾತ್ರ ಸಮಯ ಸಮಯಕ್ಕೆ ಸರಿಯಾಗಿ ಈಗಲೂ ಗೊಣಗುತ್ತಲೆ ಇತ್ತು! ಹಾಗೆ ಇಂದು ಹತ್ತರ ಸೈರನ್ ಕೂಗಿದಾಗ ಮಧ್ಯಾಹ್ನದ ಪಾಳಿ ಮುಗಿದ ಸೂಚನೆ ನೀಡಿತ್ತು. ಹತ್ತು ಬಡದರೂ ಗಂಡ ಮನೆಗೆ ಬರದಿದ್ದಾಗ 'ಯಾಕ ಇಷ್ಟು ತಡಮಾಡಿದ್ದು?' ಎಂಬ ಆತಂಕ ಪಾರ್ವತಿಗೆ ಮತ್ತೆಮತ್ತೆ ಕಾಡಹತ್ತಿತು. ರಾತ್ರಿ ಆದಂಗೆಲ್ಲ ರಸ್ತೆಗಳು ನೀರವವಾದವು. ಇದ್ದಕ್ಕಿದ್ದಂತೆ ತಣ್ಣಗೆ ಗಾಳಿ ಬೀಸಿದ್ದರಿಂದ ದೂರದಲ್ಲೆಲ್ಲೋ ಮಳೆ ಆಗತ್ತಿರಬೇಕು ಎಂದು ಊಹಿಸಿದ ಪಾರ್ವತಿ, ಹೆಂಗನ ಆಗಲಿ ಮಳಿ–ಗಾಳಿ ಜಾಸ್ತಿ ಆಗೋ ಮೊದಲ ಕಂದೀಲು ಹಚ್ಚಿಡಬೇಕೆಂದು ಮನೆಯ ಒಳಗೆ ಬಂದಳು. ಮಕ್ಕಳಾಗಲೇ ನಿದ್ದೆಗೆ ಶರಣಾಗಿದ್ದವು. ಕಾದು ಕಾದು ಸುಸ್ತಾದ ಪಾರ್ವತಿ ಏನೂ ತಿನ್ನಲು ಮನಸಾಗದೆ ಮೆಲ್ಲಗೆ ಮಕ್ಕಳ ಪಕ್ಕದಲ್ಲೆ ಮೈಚೆಲ್ಲಿದ್ದಳು. ಅವಳಿಗೆ ಅರಿವಿಲ್ಲದೆ ನಿದ್ದೆ ಆವರಿಸಿತ್ತು. ಹೊಸ ಕೆಲಸಕ್ಕೆ ಹೋಗುತ್ತಿದ್ದ ಮಾರುತಿ ಆ ದಿನ ತುಂಬಾ ತಡವಾಗಿ ಪಾಲಿಶಿಂಗ್ ಫ್ಯಾಕ್ಟರಿಯ ಕೆಲಸ ಮುಗಿಸಿಕೊಂಡು ಮನೆಗೆ ಬಂದಿದ್ದ.

**2**

ಹಳೆಯ ಸಿಮೆಂಟ್ ಫ್ಯಾಕ್ಟರಿ ಪಕ್ಕದಲ್ಲೆ ಇದ್ದ ಹೊಸ ಫ್ಯಾಕ್ಟರಿಯೂ ಏನೋ ಕಾರಣದಿಂದ ಕಳೆದ ಒಂದು ವರ್ಷದಿಂದ ಮುಚ್ಚಿಹೋದ ಪರಿಣಾಮ ಮಾರುತಿ ಚಿಂತೆಗೀಡಾಗಿದ್ದ. ಆತ ಆ ಫ್ಯಾಕ್ಟರಿಯಲ್ಲಿ ಇಪ್ಪತ್ತೈದು ವರ್ಷ ಕೆಲಸ ಮಾಡಿದ್ದ. ಅದರ ಆಧಾರದ ಮೇಲೆ ಅವನಿಗೆ ಕಾರ್ಖಾನೆ ಮುಚ್ಚುವ ನಾಕಾರು ತಿಂಗಳ ಹಿಂದಷ್ಟೇ 'ಲಾಂಗ್ ಸರ್ವೀಸ್ ಅವಾರ್ಡ್' ಸಿಕ್ಕಿತ್ತು. ಆ ಉತ್ಸಾಹವೇ ಕೊನೆಯಾಯಿತು. ಯಾವುದೋ ಕಾರಣ ನೀಡಿ ಹೊಸ ಫ್ಯಾಕ್ಟರಿಯೂ ಗೇಟಿಗೆ ನೋಟೀಸ್ ಹಚ್ಚಿ ಕೆಲಸ ಸ್ಥಗಿತಗೊಳಿಸಿದಾಗ, 'ಇದು ಕೆಲವು ತಿಂಗಳುಗಳ ಸಮಸ್ಯೆ ಇರಬಹುದು... ಸ್ವಲ್ಪ ದಿನಕ್ಕೆ ಸರಿ ಹೋಗತ್ತ ಬಿಡು...' ಅಂದುಕೊಂಡಿದ್ದ ಮಾರುತಿಗೆ ಫ್ಯಾಕ್ಟರಿ ಬಂದಾಗಿ ವರ್ಷ ಕಳೆಯುತ್ತ ಬಂದರೂ ಯಾವುದೆ ಶುಭಸೂಚನೆಗಳು ಕಾಣದಿದ್ದಾಗ ಅವನು ಅನಿವಾರ್ಯವಾಗಿ ಬೇರೆ ಉದ್ಯೋಗ ಹುಡುಕಿಕೊಂಡಿದ್ದ. ಈ ಹಿಂದಿನ ಫ್ಯಾಕ್ಟರಿ ನೌಕರಿಯಿಂದ ಬರುತ್ತಿದ್ದ ಸಂಬಳ ಅವನ ಬದುಕಿನ ನಿರ್ವಹಣೆಯ ಮೂಲವಾಗಿತ್ತು. ಅವನು ಓದಿದ್ದು ಕಡಿಮೆ, ಹಾಗಾಗಿ ಫ್ಯಾಕ್ಟರಿಯಲ್ಲಿ ಅವನಿಗೆ ಕ್ರೇನ್ ಆಪರೇಟರ್ ಹುದ್ದೆ ದಕ್ಕಿತ್ತು.

ದುಡಿದ ಇಪ್ಪತ್ತೈದು ವರ್ಷದಾಗ ಮಾರುತಿ